## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

**ಸಿ.ಸಿ. ಸಂಖ್ಯೆಃ 207/2024**

**ಸಾಕ್ಷಿಯನ್ನು ದಿಃ 11.03.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಮಾರ್ಕಂಡಯ್ಯ | ಸಿ.ಡಬ್ಲ್ಯೂಃ **2** | ಪಿ.ಡಬ್ಲ್ಯೂಃ **1** |
| ತಂದೆಯ ಹೆಸರು | ಚಿಕ್ಕಣ್ಣ | | |
| ವಯಸ್ಸು | **42**ವರ್ಷ | | |
| ಕೆಲಸ | ಕೂಲಿ | | |
| ವಾಸಸ್ಥಳ | ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

1. ಚಾಸಾ-1 ನನ್ನ ಹೆಂಡತಿ, ಚಾಸಾ-3 ರಿಂದ 6ರವರ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ 2ನೇ ಆರೋಪಿಯ ಪರಿಚಯ ಇದೆ. ಕುಮಾರಸ್ವಾಮಿ ಪರಿಚಯ ಇದೆ.

ದಿಃ 19.01.2024ರಂದು ನಾನು ಕೆಲಸ ಮುಗಿಸಿಕೊಂಡು ಮನೆಗೆ ಬಂದಾಗ ಚಾಸಾ-1ರವರು ನನಗೆ ದಿಃ 18.01.2024ರಂದು ಬೆಳಿಗ್ಗೆ 7.00 ಗಂಟೆ ಅಥವಾ 7.30ರ ಸಮಯದಲ್ಲಿ ಮನೆಯ ಮುಂದೆ ತಾನು ಕಸ ಗುಡಿಸುತ್ತಿರುವಾಗ ಕುಮಾರಸ್ವಾಮಿ ಎಂಬ ಹುಡುಗ ನೋಡುವುದು, ಗುರಾಯಿಸುವುದು ಮಾಡುತ್ತಿದ್ದನು ಎಂದು ತಿಳಿಸಿದರು. ಈ ವಿಚಾರವಾಗಿ ನಾನು ದಿಃ 19.01.2024ರಂದು ಸಂಜೆ 4.00ರ ಸಮಯದಲ್ಲಿ ದೂರು ನೀಡಲೆಂದು ಹೋಗುತ್ತಿದ್ದಾಗ, ಕುಮಾರಸ್ವಾಮಿ ಎಂಬುವವರು ಮನೆಯ ವಸಾರೆಗೆ ನುಗ್ಗಿ ನನ್ನ ಹೆಂಡತಿಯಾದ ಚಾಸಾ-1ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-1ರವರ ನೈಟಿಯನ್ನು ಹಿಡಿದು ಮನೆಯ ಮುಂಭಾಗ ಎಳೆದುಕೊಂಡು ಬಂದು ಕೆಡವಿ, ಕಾಲಿನಿಂದ ಹೊಟ್ಟೆಗೆ ಹೊದ್ದು ನೈಟಿಯನ್ನು ಹರಿದು ಹಾಕಿ, ಬಲಕುತ್ತಿಗೆಗೆ ಕೈಯಿಂದ ಹೊಡೆದು ನೋವುಂಟು ಮಾಡಿದನು. ನಾನು ಜಗಳ ಬಿಡಿಸಲು ಹೋದಾಗ 2ನೇ ಆರೋಪಿ ಕೈಯಿಂದ ನನ್ನ ಮೈಕೈಗೆ ತುಟಿಗೆ ಹೊಡೆದು ನೋವುಂಟು ಮಾಡಿದನು. ಚಾಸಾ-3,4ರವರು ಬಂದು ಜಗಳ ಬಿಡಿಸಿದರು.

2. ನಂತರ ನಾನು ಹಾಗೂ ಚಾಸಾ–1ರವರು ಯಾವುದೋ ಆಟೋದಲ್ಲಿ ಹೋಗಿ ಹುಣಸೂರು ಸರಕಾರಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ಈ ಮೇಲ್ಕಂಡ ಹೇಳಿಕೆಯನ್ನು ನಾನು ತನಿಖಾಧಿಕಾರಿಯವರ ಮುಂದೆ ನೀಡಿರುತ್ತೇನೆ.

**ಮುಂದುವರೆದ ಮುಖ್ಯವಿಚಾರಣೆಃ ಮಾನ್ಯ ಎ.ಪಿ.ಪಿ.ರವರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.